# ಒಳಗೆ ನೋಡು, ಹೊರಗೆ ನೋಡು, ಮೇಲೆ ನೋಡು

## ಅಧ್ಯಾಯ 10

## ಶ್ರವಣ ಪಾಠ: ಹೊಸ ಒಡಂಬಡಿಕೆ 10



ವಾಸ್ತವತೆ: ಶಿಷ್ಯನ ಮೂರು ದೃಷ್ಟಿಕೋನಗಳನ್ನು ಮತ್ತು ನಾವು ದೇವರಿಗಾಗಿ ಹೇಗೆ ಜೀವಿಸಬೇಕು ಎಂಬುದನ್ನು ತಿಳಿದುಕೊಳ್ಳುವದು.



*“ನಿನ್ನ ನೆರೆಯವನನ್ನು ಪ್ರೀತಿಸಿ ನಿನ್ನ ವೈರಿಯನ್ನು ಹಗೆಮಾಡಬೇಕೆಂದು ಹೇಳಿಯದೆ ಎಂಬುದಾಗಿ ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರಿಗೆ ಪ್ರಾರ್ಥಿಸಿರಿ, ಹೀಗೆ ಮಾಡಿದರೆ ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೇಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ; ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಸುರಿಸುತ್ತಾನೆ.”*

– *ಮತ್ತಾಯ 5:43–45*

*“ನೀನಾದರೋ ಧರ್ಮಕೊಡುವಾಗ ನೀವು ಧರ್ಮಕೊಟ್ಟದ್ದು ಅಂತರಂಗವಾಗುವ ಹಾಗೆ ನಿನ್ನ ಬಲಗೈ ಮಾಡಿದ್ದು ಎಡಗೈಗೂ ತಿಳಿಯದಿರಲಿ, ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು.”*

– *ಮತ್ತಾಯ 6:3–4*

ಯೇಸು ದಿವ್ಯಾನಂದ ಮಾತುಗಳನ್ನು ಬೋಧಿಸಿದ ನಂತರ, ಆತನು ತನ್ನ ಶಿಷ್ಯರು ಅವರ ಅಸ್ತಿತ್ವದ ವಿಶೇಷತೆಯನ್ನು, ಮನೋವೃತ್ತಿಯನ್ನು ಮತ್ತು ಅವರ ಜೀವಿತದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿರುವ ನಡತೆಗಳನ್ನು ಕುರಿತು ನೋಡಲು ಸವಾಲನ್ನು ನೀಡಿದನು. ದಿವ್ಯಾನಂದ ಮಾತುಗಳನ್ನು ಅನುಸರಿಸಿರುವ ಈ ಧೀರ್ಘವಾದ ವೇದಭಾಗದಲ್ಲಿ, ಆತನು ಅವರಿಗೆ ಸುತ್ತಲೂ ನೋಡಲು ಸವಾಲನ್ನು ನೀಡಿದನು ಮತ್ತು ತಮ್ಮ ಅತ್ಯಂತ ಪ್ರಾಮುಖ್ಯವಾದ ಸಂಬಂಧದಲ್ಲಿ – ವೈರಿಗಳೊಡನೆ ಇರುವ ಸಂಬಂದವನ್ನು ಒಳಗೊಂಡು, ದಿವ್ಯಾನಂದ ಮಾತುಗಳನ್ನು ಅನ್ವಯಿಸಿಕೊಳ್ಳಲು ತಿಳಿಸಿದನು. ಈಗ ಮತ್ತಾಯ 6 ರಲ್ಲಿ ಯೇಸು ತನ್ನ ಶಿಷ್ಯರಿಗೆ ಮೇಲಕ್ಕೆ ನೋಡಲು ಮತ್ತು ಆತ್ಮೀಕ ಶಿಸ್ತನ್ನು ಮತ್ತು ನಿಜವಾದ ಶಿಷ್ಯನಲ್ಲಿ ಇರಬೇಕಾದ ಮೌಲ್ಯಗಳನ್ನು ಪರಿಗಣಿಸಲು ತಿಳಿಸುತ್ತಾನೆ.

ಫರಿಸಾಯರು ತಮ್ಮ ನೀತಿವಂತಿಕೆಯನ್ನು ಇತರ ಜನರ ಮೇಲೆ ಪ್ರಭಾವ ಬೀರಲು ಅಭ್ಯಾಸಿಸಿದರು. ಯೇಸು ತನ್ನ ಶಿಷ್ಯರಿಗೆ ದೇವರ ಮೆಚ್ಚಿಗೆಗೆ ಅನುಗುಣವಾಗಿ ಜೀವಿಸಲು ಸವಾಲನ್ನು ನೀಡಿದನು. ಆತನು ತನ್ನ ಶಿಷ್ಯರ ನೀತಿವಂತಿಕೆ ಶಾಸ್ತ್ರೀ ಫರಿಸಾಯರ ನೀತಿಗಿಂತ ಶ್ರೇಷ್ಠವಾಗಿದೆ ಎಂದು ಬೋಧಿಸುವಾಗ ಇದು ಕನಿಷ್ಠ ಪಕ್ಷ ಆತನು ಅರ್ಥೈಸಿದುದರ ಭಾಗವಾಗಿತ್ತು. ಕ್ರೈಸ್ತರು – ಕ್ರಿಸ್ತನ ನಿಜವಾದ ಹಿಂಬಾಲಕರು – ಅವರು ತಮ್ಮ ದೃಷ್ಟಿಯನ್ನು ದೇವರ ಮೇಲೆ ಕೇಂದ್ರಿಕರಿಸಿ ಜೀವಿಸಬೇಕು, ಆತನ ಅವರನ್ನು ಲೋಕದ ಅವಶ್ಯಕತೆಗಳಿಗೆ ತನ್ನ ಪರಿಹಾರದ ಭಾಗವಾಗಿ ಮಾಡುವಾಗ ಆತನ ಮೆಚ್ಚಿಕೆಯನ್ನು ಹುಡುಕುವವರಾಗಿರಬೇಕು.



1. ಸರಿ ಅಥವಾ ತಪ್ಪು? ಯಾರು ತಮ್ಮ ಸಂಬಂಧದಲ್ಲಿ ನೀತಿವಂತರಾಗಿರುತ್ತಾರೋ ಅವರಿಗೆ ಇತರ ಜನರೊಂದಿಗೆ ಎಂದಿಗೂ ಸಮಸ್ಯೆಗಳಿರುವದಿಲ್ಲ.

2. ಸರಿ ಅಥವಾ ತಪ್ಪು? ಯೇಸು ತನ್ನ ಶಿಷ್ಯರಿಗೆ ಯಾವಾಗಲೂ ತಮ್ಮ ಮಾತನ್ನು ಕಠಿಣವಾದ ಸಮಯದಲ್ಲಿ ಸಹ ನಡೆಸಿಕೊಡುವದು ಪ್ರಾಮುಖ್ಯವಾಗಿದೆ ಎಂದು ಬೋಧಿಸಿದನು.

3. ಸರಿ ಅಥವಾ ತಪ್ಪು? ಪರ್ವತ ಪ್ರಸಂಗವು ನಾವು ಹೇಗೆ ಜೀವಿಸಬೇಕು ಎಂದು ವರ್ಣಿಸುವದಿಲ್ಲ. ಇದು ಕೇವಲ ಪರಲೋಕವು ಹೇಗೆ ಇದೆ ಎಂಬುದರ ವರ್ಣನೆಯಾಗಿದೆ.

4. ಸರಿ ಅಥವಾ ತಪ್ಪು? ಯೇಸು ನಾವು ನಮ್ಮ ಸ್ನೇಹಿತರನ್ನು ಪ್ರೀತಿಸಬೇಕು ಮತ್ತು ವೈರಿಗಳನ್ನು ಹಗೆಮಾಡಬೇಕು ಎಂಬ ಬೋಧನೆಯನ್ನು ಒಪ್ಪಿಕೊಳ್ಳಲಿಲ್ಲ.

5. ಸರಿ ಅಥವಾ ತಪ್ಪು? ನಮ್ಮ ಆತ್ಮೀಕ ಅಭಿವೃದ್ಧಿ ನೇರವಾಗಿ ನಾವು ನಮ್ಮ ಹಣವನ್ನು ಮತ್ತು ಕೊಡುವದನ್ನು ಹೇಗೆ ನಿರ್ವಹಿಸುತ್ತೇವೆ ಎಂಬುದನ್ನು ಅವಲಂಬಿಸಿರುತ್ತದೆ.

*ಟಿಪ್ಪಣಿಯನ್ನು ನೀಡದಿದ್ದಲ್ಲಿ, ಪ್ರತಿಯೊಂದು ಪ್ರಶ್ನೆಗೆ ಒಂದು ಉತ್ತರವನ್ನು ಆಯ್ದುಕೊಳ್ಳಿರಿ.*

6. ಒಬ್ಬನು ತನ್ನ ವೈರಿಗಳನ್ನು ಪ್ರೀತಿಸಬೇಕು ಎಂಬ ವಿಚಾರವನ್ನು ಮೊದಲು ಎಲ್ಲಿ ಬೋಧಿಸಲಾಯಿತು?

a. ಪರ್ವತ ಪ್ರಸಂಗದಲ್ಲಿ

b. ಹಳೆ ಒಡಂಬಡಿಕೆಯಲ್ಲಿ

c. ಏದೇನ ತೋಟದಲ್ಲಿ

d. ಯೇಸು ಪರಲೋಕಕ್ಕೆ ಏರಿಹೋದ ನಂತರ

7. ಕ್ರೈಸ್ತ ಶಿಷ್ಯನಿಗೆ ಮಹತ್ವದ ಕಾನೂನು ಯಾವುದು?

a. ಸ್ವ–ಸುರಕ್ಷಿತತೆಯ ಕಾನೂನು

b. ಹುತಾತ್ಮನಾಗಿ ಸಾಯುವದು

c. ದೇವರನ್ನು ಮಹಿಮೆ ಪಡಿಸುವದು ಮತ್ತು ಯೇಸುವಿನ ಚಿತ್ತವನ್ನು ಮಾಡುವದು

d. ತನ್ನನ್ನು ತಾನು ಎಲ್ಲಾ ಇಚ್ಛೆಗಳಿಂದ ಬರಿದುಮಾಡಿಕೊಳ್ಳುವದು

8. ಯೇಸು ಸಮಾಧಾನದ ಕುರಿತು ಏನು ಬೋಧಿಸಿದನು?

a. ಯುದ್ಧವು ಯಾವಾಗಲೂ ತಪ್ಪು

b. ಯುದ್ಧವು ಸಮಾಧಾನದ ಏಕೈಕ ಮಾರ್ಗ

c. ಕ್ರೈಸ್ತರು ಯುದ್ಧದಲ್ಲಿ ಹೋರಾಡಬಾರದು

d. ಕ್ರೈಸ್ತರು ಮರುಸಂಧಾನಕ್ಕಾಗಿ ಪ್ರಯತ್ನಿಸಬೇಕು ಮತ್ತು ಇತರರೊಂದಿಗೆ ತಮ್ಮ ಸಂಬಂಧದಲ್ಲಿ ಯಾವಾಗಲೂ ಸಮಾಧಾನವನ್ನು ಹಾರೈಸಬೇಕು.

9. ಕ್ರೈಸ್ತರು ತಮ್ಮ ಸಂಸ್ಕೃತಿಯಲ್ಲಿ ಹೇಗೆ ಸರಿಹೊಂದಿಕೊಳ್ಳಬೇಕು?

a. ನಾವು ವ್ಯತ್ಯಾಸವಾಗಿರಬೇಕು

b. ನಾವು ನಮ್ಮ ಸುತ್ತಲೂ ಇರುವವರೊಂದಿಗೆ ಹೊಂದಿಕೊಂಡಿರಬೇಕು

c. ನಾವು ನಮ್ಮ ಸಂಸ್ಕೃತಿಯಲ್ಲಿ ಇರುವದೆಲ್ಲವನ್ನು ವಿರೋಧಿಸಬೇಕು

d. ನಾವು ನಮ್ಮನ್ನು ನಮ್ಮ ಸಂಸ್ಕೃತಿಯಿಂದ ಸಂಪೂರ್ಣವಾಗಿ ಪ್ರತ್ಯೇಕಿಸಿಕೊಳ್ಳಬೇಕು

10. ಪರ್ವತ ಪ್ರಸಂಗದಲ್ಲಿ, ಯೇಸು ತನ್ನ ಶಿಷ್ಯರಿಗೆ ಯಾವ ದಿಕ್ಕಿನತ್ತ ನೋಡಬೇಕೆಂದು ಸೂಚಿಸುತ್ತಾನೆ?

a. ತಮ್ಮೊಳಗೆ ತಾವೇ ನೋಡಿಕೊಳ್ಳಬೇಕು

b. ತಮ್ಮ ಸುತ್ತಲೂ ಇತರರೆಡೆಗೆ ನೋಡಿಕೊಳ್ಳಬೇಕು

c. ದೇವರೆಡೆಗೆ ಮೇಲಕ್ಕೆ ನೋಡಬೇಕು

d. ಮೇಲಿನ ಎಲ್ಲವುಗಳು

11. ಲೋಕದಲ್ಲಿ ವಿಭಿನ್ನವಾಗಿರಲು, ಆತನ ವಾಕ್ಯಗಳನ್ನು ಕೈಕೊಂಡು ನಡೆಯಲು ಮತ್ತು ತಮ್ಮ ವೈರಿಗಳನ್ನು ಪ್ರೀತಿಸಲು ಕ್ರೈಸ್ತರಿಗೆ ಹೇಗೆ ಸಾಧ್ಯ?

a. ನಮಗೆ ಹೆಚ್ಚಿನ ಇಚ್ಛಾಶಕ್ತಿ ಇರಬೇಕು

b. ನಾವು ಹೆಚ್ಚು ಶಿಸ್ತಿನ ಮೂಲಕ ತರಬೇತಿಯನ್ನು ಹೊಂದಬೇಕು.

c. ದೇವರು ನಮಗೆ ಬೇಕಾಗಿರುವ ಕೃಪೆಯನ್ನು ಬಲವನ್ನು ನೀಡುತ್ತಾನೆ

d. ನಾವು ಪರಲೋಕಕ್ಕೆ ಹೋಗುವವರೆಗೆ ಈ ಸಂಗತಿಗಳನ್ನು ಮಾಡಲಾಗುವದಿಲ್ಲ

12. ನಾವು ಅಗತ್ಯತೆಯಲ್ಲಿ ಇರುವವರಿಗೆ ಏಕೆ ಕೊಡಬೇಕು?

a. ನಮ್ಮ ಒಳ್ಳೇ ಕಾರ್ಯಗಳಿಗಾಗಿ ಇತರರಿಂದ ಬಹುಮಾನವನ್ನು ಹೊಂದುವದಕ್ಕಾಗಿ

b. ಅಗತ್ಯತೆಯಲ್ಲಿ ಇರುವ ಎಲ್ಲಾ ಜನರಿಗೆ ಸಹಾಯಮಾಡುವದಕ್ಕಾಗಿ

c. ಇದರಿಂದಾಗಿ ಇತರರು ನಮ್ಮ ಒಳ್ಳೇ ಕಾರ್ಯಗಳನ್ನು ನೋಡಬಹುದು

d. ದೇವರಿಂದ ಬಹುಮಾನವನ್ನು ಹೊಂದಲು

13. ದೇವರು ನಮಗೆ ಯಾವ ವಿಧದಲ್ಲಿ ಕೊಡಬೇಕು ಮತ್ತು ಪ್ರಾರ್ಥಿಸಬೇಕು ಎಂದು ಬಯಸುತ್ತಾನೆ?

a. ಪ್ರತಿಯೊಬ್ಬರೂ ನಾವು ಎಷ್ಟು ಒಳ್ಳೆಯವರಾಗಿದ್ದೇವೆ ಎಂಬುದನ್ನು ನೋಡಲೆಂದು

b. ದೇವರು ಅದನ್ನು ಆರಾಧಿಸುವ ಕಾರ್ಯ ಎಂದು ನೋಡಲೆಂದು

c. ಯಾರೊಬ್ಬರು ಗುರುತಿಸಲಾರದ ರಹಸ್ಯ ಕಾರ್ಯವಾಗಿ

d. ಆತನ ಮೆಚ್ಚಿಕೆಯನ್ನು ಗಳಿಸಿಕೊಳ್ಳುವ ಮಾರ್ಗವಾಗಿ



ನಿಮ್ಮ ಮೂಲಕ ದೇವರು ಪ್ರೀತಿಸಲು ಬಯಸುವ ವೈರಿ ನಿಮಗಿದ್ದಾರೋ? ನಿಮ್ಮ ವೈರಿಗೆ ನೀವು ದೇವರ ಕೃಪೆಯನ್ನು ಹೇಗೆ ತೋರಿಸುವಿರಿ? ಕರ್ತನಿಗಾಗಿ ನಿಮ್ಮ ತಲಾಂತುಗಳಲ್ಲಿ ನಿಮಗೆ ಯಾವುದು

ಪ್ರಾಮುಖ್ಯವಾಗಿದೆ; ನೀವು ಎಷ್ಟು ಕೊಡುತ್ತೀರಿ ಅಥವಾ ಕೊಡುವದರಲ್ಲಿ ನಿಮ್ಮ ಉದ್ದೇಶ ಏನಾಗಿದೆ? ಕರ್ತನಿಗೆ ಯಾವುದು ಪ್ರಾಮುಖ್ಯವಾಗಿದೆ? ಏಕೆ?



ದೇವರು ನಿಮಗೆ ನೀಡಿದ ಎಲ್ಲಾ ವರಗಳಿಗಾಗಿ ದೇವರಿಗೆ ವಂದಿಸಿರಿ. ಶುದ್ಧವಾದ ಹೃದಯದಿಂದ ಆತನ ಮೇಲಿರುವ ನಿಮ್ಮ ಪ್ರೀತಿಗಾಗಿ ನಿಮ್ಮ ಕಾಣಿಕೆಗಳನ್ನು ನೀಡಲು ಸಹಾಯ ಮಾಡುವಂತೆ ಆತನನ್ನು ಬೇಡಿಕೊಳ್ಳಿರಿ. ನಿಮಗೆ ಹೆಚ್ಚಾಗಿ ವಹಿಸಿಕೊಡಲು ಆತನನ್ನು ಬೇಡಿಕೊಳ್ಳಿರಿ, ಇದರಿಂದಾಗಿ ನೀವು ನಂಬಿಗಸ್ತಕೆಯಿಂದ ಆತನಿಗೆ ಹೆಚ್ಚಾಗಿ ಕೊಡಲು ಶಕ್ತರಾಗುವಂತೆ ಬೇಡಿಕೊಳ್ಳಿರಿ.



## ಆಳವಾಗಿ ಹೋಗುವದು

1. ಶಿಷ್ಯರು ಯೇಸುವಿನ ಪ್ರಶ್ನೆಗಳಿಗೆ ಪರಿಹಾರವಾಗಿ ಮತ್ತು ಉತ್ತರವಾಗಿ ಜೀವಿತದಲ್ಲಿ ಆಚರಿಸಬೇಕಾದ ಮೂರು ದೃಷ್ಟಿಕೋನಗಳು ಅಥವಾ ಸೂಚನೆಗಳು ಯಾವವು?

2. ತನ್ನ ಶಿಷ್ಯರಿಗೆ ವೈರಿಗಳೊಂದಿಗೆ ಅವರ ಸಂಬಂಧದ ಕುರಿತು ಬೋಧಿಸಿದ ನಂತರ, ಸರಿಯಾದ ವಿಧದಲ್ಲಿ ಮೇಲಕ್ಕೆ ನೋಡುವದರ ಪ್ರಾಮುಖ್ಯತೆಯ ಕುರಿತು ಯೇಸು ಬೋಧಿಸಿದನು, ಇದರ ವಿಶಿಷ್ಟತೆ ಏನು?

3. ಮತ್ತಾಯನ ಸುವಾರ್ತೆಯ ಆರನೆಯ ಅಧ್ಯಾಯದ ಮೊದಲಿನ ಅರ್ಧಭಾಗದಲ್ಲಿ ಯೇಸುವಿನ ಬೋಧನೆಯ ಪ್ರಕಾರ ಯೇಸುವಿನ ಶಿಷ್ಯರ ನೀತಿವಂತಿಕೆ ಮತ್ತು ಶಾಸ್ತ್ರೀ ಮತ್ತು ಫರಿಸಾಯರ ನೀತಿವಂತಿಕೆಯ ಮಧ್ಯದಲ್ಲಿರುವ ವ್ಯತ್ಯಾಸವೇನು?

4. ಈ ವೇದವಾಕ್ಯದ ಇದೇ ವೇದಭಾಗದಲ್ಲಿ ಯೇಸುವಿನ ಶಿಷ್ಯರಲ್ಲಿ ಯಾವ ಮತ್ತು ಏಕೆ ನೇರವಾದ ಮೂರು ಆತ್ಮೀಕ ಶಿಸ್ತುಗಳಿವೆ?

5. ನೀವು ಅನ್ವಯಿಸುವ 20 ಪ್ರಶ್ನೆಗಳ ಮೇಲೆ ಅಥವಾ ಯೇಸು ನೇರವಾಗಿ ಕೇಳಿದ ಪ್ರಶ್ನೆಗಳ ಮೇಲೆ, ಯೇಸುವಿನ ಶಿಷ್ಯರ ಹೊರನೋಟದ ಮೌಲ್ಯಗಳನ್ನು ಕೇಂದ್ರಿಕರಿಸುತ್ತೀರೋ ಮತ್ತು ಮತ್ತಾಯ 6:19–34 ರಲ್ಲಿ ನಮ್ಮ ಸಂಪತ್ತು ಯಾವ ವಿಧದಲ್ಲಿ ನಮ್ಮ ಮನಸ್ಸು ಎಲ್ಲಿದೆ ಎಂಬುದನ್ನು ಎಂದು ತೋರಿಸುತ್ತದೆ?

6. ಒಂದುವೇಳೆ ನೀವು ನಿಮ್ಮ ಮೌಲ್ಯಗಳನ್ನು ಅಥವಾ ನಿಮ್ಮ ಆದ್ಯತೆಗಳನ್ನು ಒಂದು ಡಜನ್ ವೃತ್ತಗಳೊಂದಿಗೆ ಸುತ್ತುವರೆದ ಎತ್ತಿನ ಕಣ್ಣಿನಂತೆ ಗುರಿಯಾಗಿಟ್ಟುಕೊಂಡಿರವ ಹಾಗೆ ಎಂದು ನೀವು ಯೋಚಿಸಿದ್ದಲ್ಲಿ, ಈ ವೇದವಾಕ್ಯದ ಪ್ರಕಾರ ಯೆಸುವಿನ ನಿಜವಾದ ಶಿಷ್ಯನ "ಮೌಲ್ಯಗಳ ಆದ್ಯತೆಯ ಗುರಿ" ಯಾವುದಾಗಿರಬಹುದು?

________________________________________

________________________________________

________________________________________

7. ಯೇಸುವಿನ ನಿಜವಾದ ಶಿಷ್ಯನು ನೇರವಾಗಿ ಶಿಸ್ತಿಗೆ ಒಳಪಟ್ಟು ಮತ್ತು ತನ್ನ ಜೀವಿತದಲ್ಲಿ ಮೌಲ್ಯಗಳನ್ನು ಹೊಂದಿಕೊಂಡಿರುವಾಗ ಅದು ಹೇಗೆ ಅವರಿಗೆ ಯೇಸುವಿನ ಪರಿಹಾರವಾಗಿರುತ್ತದೆ?

________________________________________

________________________________________

________________________________________